Varahi Irrigation Project

77 SRI A.G. KODGI (Baindur).—Will the Chief Minister be pleased to state :—

(a) the total amount sanctioned for the Varahi Irrigation Project for the year 1979–80 and 1980–81;

(b) the actual expenditure incurred during the period so far.

SRI R. GUNDU RAO (Chief Minister),—

(a) The total amount sanctioned for Varahi Irrigation Project is as follows (original budget allotment).

Year 1979–80 ... Rs. 4.00 lakhs.

Year 1980–81 ... Rs. 50.00 lakhs.

(b) The actual expenditure incurred during 1979–80 is Rs. 0.94 lakhs and during 1980–81 (till end of November), is Rs. 9.03 lakhs.

ಶ್ರೀ ಎ. ಜಿ. ಕೊಡಗಿ.—ವರಾಹಿ ನೀರಾವರಿ ಯೋಜನೆಯ ಒಟ್ಟು ಅಂದಾಜು ವೆಚ್ಚ ಎಷ್ಟು ಮತ್ತು ಅದನ್ನು ಪೂರ್ಣಗೊಳಿಸುವ ಕೊನೆಯ ತಾರೀಖು ಯಾವುದು ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ (ಮುಖ್ಯ ಮಂತ್ರಿಗಳ ಪರವಾಗಿ).— ವರಾಹಿ ಯೋಜನೆಯು ಒಟ್ಟು ಅಂದಾಜು ವೆಚ್ಚ ೯೪೩ ಲಕ್ಷ ರೂಪಾಯಿಗಳು. ಆದರೆ ಅದನ್ನು ಯಾವ ಅವಧಿಯಲ್ಲಿ ಮುಗಿಸುತ್ತೇವೆಂಬುದನ್ನು ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ. ಆದಷ್ಟು ಬೇಗ ಮುಗಿಸುವ ವ್ಯವಸ್ಥೆ ಮಾಡುತ್ತೇವೆ.

ಶ್ರೀ ಎ. ಜಿ. ಕೊಡಗಿ.—ಯೋಜನೆಯನ್ನು ತಯಾರಿಸುವಾಗ ಅದನ್ನು ಇಂತಿಷ್ಟು ಕಾಲದಲ್ಲಿ ಮುಗಿಸಬೇಕೆಂಬ ಒಂದು ಅವಧಿಯನ್ನು ಗೊತ್ತು ಮಾಡತಕ್ಕ ಪರಿಪಾಠ ಇದೆ ಎಂದು ಕೇಳಿದ್ದೇನೆ. ಆದರೆ ಆ ಬಗ್ಗೆ ಏನೂ ಹೇಳಿಲ್ಲ. ಆದ್ದರಿಂದ ಈಗಲಾದರೂ ಆ ಯೋಜನೆ ಯಾವಾಗ ಕೊನೆಗೊಳ್ಳುತ್ತದೆಂಬುದನ್ನು ತಿಳಿಸುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.— ಯಾವುದಾದರೂ ಒಂದು ನೀರಾವರಿ ಕಾರ್ಯಕ್ರಮವನ್ನು ತೆಗೆದುಕೊಂಡರೆ ನಾನಾ ಅಡಚಣೆಗಳು ಬರುವುದು ಸ್ವಾಭಾವಿಕ. ಸರ್ಕಾರದ ಪರಿಸ್ಥಿತಿಯನ್ನು ನೋಡಿಕೊಂಡು ಕೆಲಸ ಮಾಡಬೇಕಾಗುತ್ತದೆ. ಆದ್ದರಿಂದ, ಯೋಜನೆಗಳನ್ನು ಮಾಡತಕ್ಕ ಸನ್ನಿವೇಶದಲ್ಲಿ ನಿರ್ದಿಷ್ಟವಾಗಿ ಇಂತಿಷ್ಟೇ ಅವಧಿಯಲ್ಲಿ ಮುಗಿಸುತ್ತೇವೆಂದು ಹೇಳುವುದಕ್ಕಾಗುವುದಿಲ್ಲ. ಹಾಗೆ ಹೇಳುವುದಕ್ಕೆ ಆಗದಿದ್ದರೂ ಕೂಡ ತಮ್ಮ ಕಳಕಳಿಯನ್ನು ಅರಿತುಕೊಂಡು ಆದಷ್ಟು ಬೇಗ ಆ ಕೆಲಸವನ್ನು ಮುಗಿಸಲು ಸರ್ಕಾರ ಪ್ರಯತ್ನ ಮಾಡುತ್ತದೆಂದು ಹೇಳುತ್ತೇನೆ.

ಅಧ್ಯಕ್ಷರು.—ಯೋಜನೆಯನ್ನು ತಯಾರು ಮಾಡುವಾಗ ಅದನ್ನು ಇಂಥ ಅವಧಿಯಲ್ಲಿ ಮುಗಿಸುತ್ತೇವೆಂದು ಏನಾದರೂ ಹೇಳಿರುವುದು ಇದೆಯೆ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಮುಖ್ಯ ಮಂತ್ರಿಗಳು ಆ ಕ್ಷೇತ್ರಕ್ಕೆ ಬಂದಾಗ ೨ ವರ್ಷದಲ್ಲಿ ಈ ಯೋಜನೆಯನ್ನು ಮುಗಿಸಬೇಕೆಂದು ಹೇಳಿದ್ದಾರೆ. ನಾವು ಕೂಡ ಆ ಒಂದು ವಿಚಾರವನ್ನು ಇಟ್ಟುಕೊಂಡಿದ್ದೇವೆ.

ಶ್ರೀ ಎಂ. ಸಿ. ನಾನಯ್ಯ.—ಸರ್ಕಾರ ಯಾವುದೇ ಒಂದು ಯೋಜನೆಯನ್ನು ತಯಾರಿಸಬೇಕಾದರೂ, ಆ ಯೋಜನೆಯನ್ನು ಪ್ರಾರಂಭಿಸುವ ಕಾಲವನ್ನು ಮತ್ತು ಪೂರ್ಣಗೊಳಿಸುವ ಕಾಲವನ್ನು ಪ್ರಾಜೆಕ್ಟ್ ರಿಪೋರ್ಟಿನಲ್ಲಿ ಬರೆದಿರಲೇಬೇಕು. ಆ ರೀತಿ ಇದೆಯೆ ? ಇಲ್ಲದೆ ಹೋದರೆ ಅದು ಪ್ರಾಜೆಕ್ಟ್ ರಿಪೋರ್ಟ್ ಅಲ್ಲ. ಆದ್ದರಿಂದ, ದಯವಿಟ್ಟು ತಿಳಿಸಿ, ಇಲ್ಲದಿದ್ದರೆ ವಾಪಸ್ಸು ತೆಗೆದುಕೊಳ್ಳಿ.

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಯೋಜನೆಯನ್ನು ಪೂರ್ಣಗೊಳಿಸುವ ಅವಧಿ ೫ ವರ್ಷ ಎಂದು ಹಾಕಿಕೊಂಡಿದ್ದೇವೆ.

ಶ್ರೀ ಆನಂದ ಕುಂದ ಹೆಗ್ಗಡೆ.—ವರಾಹಿ ಯೋಜನೆಯ ಅಂದಾಜನ್ನು ಪುನರ್ವಿಮರ್ಶೆ ಮಾಡುತ್ತಾರೆಂದು ಕೇಳಿದ್ದೇನೆ. ಇದು ನಿಜವೇ ? ಈ ವರ್ಷ ೫೦ ಲಕ್ಷ ರೂಪಾಯಿ ಇಟ್ಟಿದ್ದೀರಿ ; ಈಗಾಗಲೇ ಆರ್ಥಿಕ ತಿಂಗಳು ಮುಗಿಯುತ್ತ ಬಂತು. ಆದ್ದರಿಂದ, ಈ ತಿಂಗಳಲ್ಲಿ ಕಾಮಗಾರಿಯನ್ನು ಪೂರೈಸುತ್ತೀರಾ ?

ಶ್ರೀ ಬಿ.ಬಿ. ಚಿಮ್ಮನಕಟ್ಟಿ.—ಈ ವರ್ಷ ನಾವು ಈ ಯೋಜನೆಗಾಗಿ ಸುಮಾರು ೫೦ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಆದರಲ್ಲಿ ಈಗಾಗಲೇ ೧೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಪೂರ್ತಿಯಾಗಿ ಖರ್ಚು ಮಾಡಿಲ್ಲ. ಈಗ ಪ್ರಿಲಿಮಿನರಿ ವರ್ಕ್ಸ್ ಮಾತ್ರ ತೆಗೆದುಕೊಂಡಿದ್ದೇವೆ ; ಅಂದರೆ, ರಸ್ತೆಗಳ ನಿರ್ಮಾಣ ಇತ್ಯಾದಿ. ಡೀಟೈಲ್ಡ್ ಇನ್ವೆಸ್ಟಿಗೇಷನ್ ಕೂಡ ಮಾಡಬೇಕಾಗಿದೆ. ಮುಂದಿನ ವರ್ಷ ಹೆಚ್ಚಿನ ಕೆಲಸವನ್ನು ತೆಗೆದುಕೊಳ್ಳುತ್ತೇವೆ. ಜೊತೆಗೆ, ಅಲ್ಲಿ ವಿದ್ಯುಚ್ಛಕ್ತಿಯ ಉತ್ಪಾದನೆಯಾಗಲೀ ಅಥವಾ ಇನ್ನೂ ಹೆಚ್ಚಿನ ನೀರಾವರಿಯನ್ನು ಮಾಡುವುದಾಗಲೀ ಸಾಧ್ಯವೇ ಎಂಬುದು ಸರ್ಕಾರದ ದೃಷ್ಟಿಯಲ್ಲಿದೆ ; ಅಡನ್ನು ಕೂಡ ಸರ್ಕಾರ ಪರಿಶೀಲಿಸುತ್ತಿದೆ.

ಒಬ್ಬರು ಮಾನ್ಯ ಸದಸ್ಯರು.—ವರಾಹಿ ಯೋಜನೆಯಿಂದ ಉಡುಪಿ ಹಾಗೂ ಕುಂದಾಪುರ ಈ ಎರಡು ತಾಲ್ಲೂಕುಗಳ ಜನರಿಗೆ ಪ್ರಯೋಜನವಾಗುತ್ತದೆ. ಯೋಜನೆಯನ್ನು ಸಾಧ್ಯವಾದಷ್ಟು ಜಾಗ್ರತೆ ಮುಗಿಸುವುದು ಒಳ್ಳೆಯದು ಇಲ್ಲದೆ ಹೋದರೆ ವರ್ಷ ವರ್ಷ ಯೋಜನೆಗೆ ಹಣ ಜಾಸ್ತಿ ಬೇಕಾಗುತ್ತದೆ. ಈ ವರ್ಷ ಒಂದು ಯೋಜನೆಗೆ ೨೦ ಕೋಟಿ ರೂಪಾಯಿ ಬೇಕಾಗಿದ್ದರೆ ಮುಂದೆ ೪-೫ ವರ್ಷಗಳು ಕಳೆದರೆ ಅದೇ ಯೋಜನೆಗೆ ೧೦೦ಕೋಟಿ ರೂಪಾಯಿ ಬೇಕಾಗುತ್ತದೆ. ಇದು ಭಾರೀ ಯೋಜನೆ, ಅದಕ್ಕಾಗಿ ತಮಗೆ ವಂದಿಸಬೇಕಾಗಿದೆ. ಇದನ್ನು ಅದಷ್ಟು ಜಾಗ್ರತೆ ಪೂರ್ಣಗೊಳಿಸುವ ದಿಸೆಯಲ್ಲಿ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೀರಾ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಸದಸ್ಯರು ಏನು ಕಳವಳ ಪಡಬೇಕಾಗಿಲ್ಲ. ಏಕೆಂದರೆ, ಮಾನ್ಯ ಅರ್ಥ ಮಂತ್ರಿಗಳು ಅದೇ ಜಿಲ್ಲೆಯವರು ಇರುವುದರಿಂದ ಹೆಚ್ಚಾಗಿ ಹಣ ಸಹಾಯ ಮಾಡುತ್ತಾರೆ.

ಶ್ರೀ ಎ. ಜಿ. ಕೊಡಗಿ.— ತಾವು ಕೊಟ್ಟಿರುವ ಮಾಹಿತಿ ಪ್ರಕಾರ, ೧೯೮೦-೮೧ನೇ ಸಾಲಿಗೆ ೫೦ ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ, ಅದರಲ್ಲಿ ೯ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಲಿಕ್ಕೆ ಸಾಧ್ಯವಾಗಿದೆ ಎಂದು ಹೇಳಿದ್ದೀರಿ. ಇದರಲ್ಲಿ ಪೂರ್ವಾಭಾವಿಯಾಗಿ ರಸ್ತೆ, ಮನೆ, ಸಿಬ್ಬಂದಿಯ ಸಂಬಳ ಇತ್ಯಾದಿಗಳಿಗೆ ಖರ್ಚಾಗಿದೆಯೇ ವಿನಹ ನೀರಾವರಿ ಕಾಮಗಾರಿಗಾಗಿ ಏನೂ ಪ್ರಯೋಜನವಾಗಿಲ್ಲ. ಈ ರೀತಿ ಮಾಡಲು ಕಾರಣವೇನು ? ಅಷ್ಟು ಹಣವನ್ನು ಒದಗಿಸಿ ಇಷ್ಟು ಮಾತ್ರ ಖರ್ಚು ಮಾಡಬೇಕೆಂಬ ಸರ್ಕಾರದ ಧೋರಣೆ ಏನಾದರೂ ಇದೆಯೆ ?

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ನಾನು ಮೊದಲೇ, ಪ್ರಿಲಿಮಿನರಿ ವರ್ಕ್ಸ್ ಅನ್ನು ಮಾತ್ರ ಈಗ ತೆಗೆದುಕೊಂಡಿದ್ದೇವೆಂದು ಹೇಳಿದೆ. ಮಾರ್ಚ್ ೩೧ ರೊಳಗೆ ೨೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡುವವರಿದ್ದೇವೆ.

Purchase of LIC Building in Bangalore City

149 SRI G. BASAVANNAPPA (Holehonnur).—Will the Minister for Communication and Buildings be pleased to state :—

(a) whether it is a fact that the Government of Karnataka has purchased LIC Building in Bangalore City ;

(b) if so, the amount of purchase ;

(c) the offices that are going to be accommodated ;

(d) the amount of estimate to be saved by way of rent by the Government ?